## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 132 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಿವಕುಮಾರ್ ಕೆ. (ನಾಮ ನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | 28.01.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಕಂದಾಯ ಇಲಾಖೆಯಿಂದ ಭೂದಾಖಲೆಗಳನ್ನು ಸರಿಪಡಿಸಲು, ವಿಶೇಷವಾಗಿ ದರಖಾಸ್ತು ಪೋಡಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕೈಗೊಂಡಿರುವ ಪೋಡಿ ಅಭಿಯಾನ ದಿಂದ ಸಾಧಿಸಿರುವ ಪ್ರಗತಿ ಏನು (ಜಿಲ್ಲಾ ವಾರು ಮಾಹಿತಿಯನ್ನು ನೀಡುವುದು);</td><td rowspan="3">ದರಖಾಸ್ತು ಪೋಡಿ ದುರಸ್ತಿ ಮಾಡುವ ಕುರಿತು "ದರಖಾಸ್ತು ಪೋಡಿ ಅಭಿಯಾನ" ಪ್ರಾರಂಭಿಸಿ, ಸರ್ಕಾರದ ಆದೇಶ ಸಂಖ್ಯೆ.ಕಂಇ 156 ಎಸ್‌ಎಸ್‌ಎಂ 2024, ದಿನಾಂಕ 25-11-2024 ರಲ್ಲಿ ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳನ್ನು ಭರ್ತಿ ಮಾಡಿ ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿ, ನಮೂನೆ 01 ರಿಂದ 05 ಗಳಿಗೆ, ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಬೇಕಾಗಿರುವ ಕ್ರಮವನ್ನು ರದ್ದುಪಡಿಸಿ, ಇದನ್ನು ದೃಢೀಕರಿಸುವ ಜವಾಬ್ದಾರಿಯನ್ನು ತಹಶೀಲ್ದಾರ್ ರವರಿಗೆ ಸೀಮಿತಗೊಳಿಸಿದೆ ಮತ್ತು ಸರ್ಕಾರಿ ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ದುರಸ್ತಿ ಪಡಿಸುವಂತೆ ಸೂಚಿಸಿದೆ.<br><br>ಕಡ್ಡಾಯವಾಗಿ ಪ್ರತಿ ಸರ್ವೆ ನಂಬರಿಗೆ ಒಂದು ಬಾರಿಗೆ ಎಲ್ಲಾ ಮಂಜೂರಿದಾರರಿಗೆ ಏಕಕಾಲಕ್ಕೆ ನಮೂನೆ 1 ರಿಂದ 5 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಸಹ ಆನ್‌ಲೈನ್‌ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ.<br><br>"ದರಖಾಸ್ತು ಪೋಡಿ ಅಭಿಯಾನ" ಯೋಜನೆ ಕಾರ್ಯವು ಪ್ರಗತಿಯಲ್ಲಿದ್ದು, ಈ ಅಭಿಯಾನದಡಿ ಸಾಧಿಸಿರುವ ಪ್ರಗತಿ ವಿವರ ಈ ಕೆಳಕಂಡಂತಿದೆ;<br>
<table>
<tr><th>ಅನುಭಂದ-1 ನೀಡಿರುವ ಮಂಜೂರಿ ದಾರರ ಸಂಖ್ಯೆ</th><th>ಅಳತೆಗೆ ತೆಗೆದುಕೊಂಡಿರುವ ಮಂಜೂರಿದಾರರ ಸಂಖ್ಯೆ</th><th>ಅಳತೆ ಪೂರ್ಣಗೊಂಡಿರುವಮಂಜೂರಿದಾರರ ಸಂಖ್ಯೆ</th></tr>
<tr><td>1,80,863</td><td>1,56,566</td><td>1,37,109</td></tr>
</table>
<br>ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನದಲ್ಲಿ ಆದ್ಯತೆ ಮೇರೆಗೆ ಗ್ರಾಮಗಳನ್ನು ಹಂತ ಹಂತವಾಗಿ ಆಯ್ಕೆ ಮಾಡಿಕೊಂಡು ಪೋಡಿ ಕ್ರಮವಹಿಸಲಾಗುತ್ತಿದೆ.<br><br>ಸಮಗ್ರವಾಗಿ ದರಖಾಸ್ತು ಪೋಡಿ ಅಭಿಯಾನ ಕಾರ್ಯಕ್ರಮ- ಕೈಗೊಳ್ಳಲಾಗಿದ್ದು, ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನದಡಿ ಈವರೆವಿಗೂ ಒಟ್ಟು 1,55,012 ಮಂಜೂರಿದಾರರಿಗೆ ಅನುಬಂಧ-1 ನೀಡಿದಂತೆ, 1,31,003 ಅನುಬಂಧ-1 ಗಳು ತಂತ್ರಾಂಶದ ಮೂಲಕ ಅಳತೆಗೆ ಸ್ವೀಕೃತವಾಗಿದ್ದು, ಈ ಪೈಕಿ</td></tr>
<tr><td>ಆ)</td><td>ರಾಜ್ಯದಲ್ಲಿ ಪೋಡಿ ಅಭಿಯಾನ ಎಷ್ಟು ದಿನಗಳೊಳಗೆ ಪೂರ್ಣಗೊಳ್ಳಲಿದೆ;</td></tr>
<tr><td>ಇ)</td><td>ಬುಡಕಟ್ಟು ಸಮುದಾಯದ ಜನರ ಅನುಭವದಲ್ಲಿರುವ ಕಂದಾಯ ಭೂಮಿಯನ್ನು ಸರ್ಕಾರವು ಅಭಿಯಾನದ ಮೂಲಕ ಎಷ್ಟು ಬುಡಕಟ್ಟು ಜನರಿಗೆ ಈ ಸೌಲಭ್ಯವನ್ನು ಒದಗಿಸಿದೆ? (ಮಾಹಿತಿ ಒದಗಿಸುವುದು)</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 1,14,873 ಮಂಜೂರಿದಾರರ ಜಮೀನು ಅಳತೆ ಮಾಡಿ 55,459 ಮಂಜೂರಿದಾರರ ಜಮೀನು ಪೋಡಿ ದುರಸ್ತಿಪಡಿಸಲಾಗಿದೆ. ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನದಲ್ಲಿ ಇವರೆಗೆ ಸಾಧಿಸಿರುವ ಜಿಲ್ಲಾವಾರು ಪ್ರಗತಿಯನ್ನು ಅನುಭಂದದಲ್ಲಿ ಲಗತ್ತಿಸಿದೆ.<br><br>ನಿರ್ದಿಷ್ಟವಾಗಿ ಬುಡಕಟ್ಟು ಸಮುದಾಯದ ಜನರ ಅನುಭವದಲ್ಲಿರುವ ಕಂದಾಯ ಭೂಮಿಗೆ ಕಾನೂನುಬದ್ಧ ವಾರಸುದಾರಿಕೆ ನೀಡುವ ಬಗ್ಗೆ ಪರಿಶೀಲನೆಯಲ್ಲಿರುವುದಿಲ್ಲ. |

**ಸಂಖ್ಯೆ: ಕಂಇ 14 ಎಸ್‌ಎಸ್‌ಸಿ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| ಅನುಭಂದ -1 | | | | LCQ 132 |
|---|---|---|---|---|
| ದರಖಾಸ್ತು ಪೋಡಿ ಅಭಿಯಾನದಡಿ ಸಾಧಿಸಿರುವ ಜಿಲ್ಲಾವಾರು ಪ್ರಗತಿ | | | | |
| ಕ್ರ | ಜಿಲ್ಲೆ | ಅನುಭಂದ-1 ನೀಡಿರುವ ಮಂಜೂರಿದಾರರ ಸಂಖ್ಯೆ | ಅಳತೆಗೆ ತೆಗೆದುಕೊಂಡಿರುವ ಮಂಜೂರಿದಾರರ ಸಂಖ್ಯೆ | ಅಳತೆ ಪೂರ್ಣ ಗೊಂಡಿರುವ ಮಂಜೂರಿದಾರರ ಸಂಖ್ಯೆ |
| 1 | YADAGIR | 513 | 513 | 412 |
| 2 | VIJAYAPURA | 91 | 89 | 81 |
| 3 | VIJAYANAGARA | 1804 | 1577 | 1312 |
| 4 | UTTAR KANNADA | 724 | 490 | 667 |
| 5 | UDUPI | 25417 | 22960 | 22201 |
| 6 | TUMAKURU | 17023 | 15214 | 14758 |
| 7 | SHIVAMOGGA | 977 | 950 | 912 |
| 8 | RAICHUR | 777 | 733 | 641 |
| 9 | MYSORE | 4672 | 4491 | 3668 |
| 10 | MANDYA | 2604 | 2364 | 2241 |
| 11 | KOPPAL | 2096 | 2037 | 1805 |
| 12 | KOLAR | 7239 | 6758 | 4782 |
| 13 | KODAGU | 4138 | 3993 | 3308 |
| 14 | KALABURAGI | 1629 | 1614 | 1457 |
| 15 | HAVERI | 834 | 820 | 728 |
| 16 | HASSAN | 24409 | 21970 | 20803 |
| 17 | GADAG | 0 | 0 | 0 |
| 18 | DHARWAD | 201 | 201 | 201 |
| 19 | DAVANAGERE | 6687 | 6622 | 6166 |
| 20 | DAKSHINA KANNADA | 46518 | 31665 | 22941 |
| 21 | CHITRADURGA | 9445 | 9284 | 8948 |
| 22 | CHIKKAMAGALURU | 3358 | 3232 | 3016 |
| 23 | CHIKKABALLAPUR | 5541 | 5447 | 4111 |
| 24 | CHAMARAJANAGARA | 1802 | 1755 | 1702 |
| 25 | BIDAR | 256 | 252 | 175 |
| 26 | BENGALURU SOUTH | 4288 | 4284 | 4220 |
| 27 | BENGALURU | 33 | 9 | 6 |
| 28 | BELAGAVI | 311 | 311 | 329 |
| 29 | BANGALORE RURAL | 5985 | 5456 | 4102 |
| 30 | BALLARI | 1456 | 1440 | 1387 |
| 31 | BAGALKOTE | 35 | 35 | 29 |
| | **Grand Total** | **1,80,863** | **1,56,566** | **1,37,109** |



File No. RD/14/SSC/2026-RD_SSLR-REVENUE DEPATMENT SEC (Computer No. 2051903)
Generated from eOffice by JAYBHEEM, RD-SA(JB), SENIOR ASSISTANT, REVENUE DEPARTMENT SEC on 28/01/2026 12:52 PM